**O.S. No: 37/2016** **P.W:1**

ದಿನಾಂಕ : 20.01.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಶ್ರೀ ಕೆ.ಕೆ.ಆರ್. ವಕೀಲರಿಂದಃ-

ನನ್ನ ಮಾವ ಚನ್ನಪಾಜಯ್ಯರವರ ತಂದೆ ಬಸವಣ್ಣ ಎಂದರೆ ಹೌದು. ಬಸವಣ್ಣನಿಗೆ ಮೂರು ಜನ ಗಂಡುಮಕ್ಕಳು. ಅವರೆಂದರೆ ನನ್ನ ಮಾವ ಚನ್ನಪಾಜಯ್ಯ, ಪುಟ್ಟಸ್ವಾಮಪ್ಪ, ನಿಂಗರಾಜು ಎಂದರೆ ಹೌದು. ನಿಪಿ 35 ರ ದಾಖಲೆ ಬಸವಣ್ಣ ಬಿನ್ ನಂಜುಂಡಯ್ಯರವರಿಗೆ ಸೇರಿದಂತಹ ದಾಖಲೆ ಎಂದರೆ ಹೌದು. ಐಸಿಆರ್ 75/81-82 ರಲ್ಲಿನ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಹೌದು. ನಿಪಿ 36 ರ ದಾಖಲೆ ಆಗುವ ವೇಳೆಗೆ ಎರಡನೇ ಪ್ರತಿವಾದಿಗೆ 23 ವರ್ಷ, ಮೂರನೇ ಪ್ರತಿವಾದಿಗೆ 21 ವರ್ಷ, ಎಂದರೆ ಸರಿಯಲ್ಲ. ನಿಪಿ 37 ರ ದಾಖಲೆ ಭುಜಂಗಸ್ವಾಮಿ ಹಾಗೂ ಅವರ ಮಕ್ಕಳ ನಡುವೆ ಆದಂತಹ ದಾಖಲೆ ಎಂದರೆ ಸರಿಯಲ್ಲ. ನಿಪಿ 37 ರ ದಾಖಲೆಯಂತೆ ಸರ್ವೆ ನಂಬರ್ ನಿಪಿ 37 ರ 3 ನೇ ಕಲಂನಲ್ಲಿ ನಮೂದಿಸಿರುವಂತಹ ಸ್ವತ್ತನ್ನು ಭುಜಂಗಸ್ವಾಮಿ ರವರ ಮಗ ಶಿವಕುಮಾರ್ ರವರಿಗೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ 37 ರಂತೆ ಆದಂತಹ ವಿಭಾಗಕ್ಕೆ ಭುಜಂಗಸ್ವಾಮಿರವರ ಮಗ ಹರೀಶ್ ರವರು ಸಮ್ಮತಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ನಿಪಿ 48 ರ ದಾಖಲೆಯಲ್ಲಿ ಭುಜಂಗಸ್ವಾಮಿರವರು ಒಟ್ಟು ಕುಟುಂಬದ ಆದಾಯದಿಂದ ಹಳ್ಳಿಮೈಸೂರು ಮನೆಯನ್ನು ಖರಿದೀಸಿರುವ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದ ಹಾಗೂ ನನ್ನ ಗಂಡ ನೀಡಿದ ಹಣದಿಂದ ಖರೀದಿಸಿದ ಆಸ್ತಿ ಎಂದು ಉತ್ತರಿಸುತ್ತಾರೆ. ನನ್ನ ಗಂಡ ಹಣ ನೀಡಿದ ಬಗ್ಗೆ ಯಾವುದೇ ದಾಖಲಾತಿ ಇರುವುದಿಲ್ಲ. ನಿಪಿ 77 ರಲ್ಲಿನ ಚೆನ್ನಾಜಮ್ಮ ನನ್ನ ಅತ್ತಿಗೆ.. ಚನ್ನಾಜಮ್ಮ ದಿನಾಂಕ : 16.11.2001 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಹೌದು. ಕುಟುಂಬದಲ್ಲಿ ಆದಂತಹ ಹಿಸ್ಸೆಯಲ್ಲಿ 2001 ರ ಹಿಂದಿನ ಸಾಲಿನಲ್ಲಿ ನಮ್ಮ ಕುಟುಂಬದಲ್ಲಿ ಆದಂತಹ ವಿಭಾಗದಲ್ಲಿ ಚನ್ನಾಜಮ್ಮರವರನ್ನು ಪಾರ್ಟಿಯನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ಚನ್ನಾಜಮ್ಮನವರನ್ನು ಕೈ ಬಿಟ್ಟು ನಮ್ಮ ಕುಟುಂಬದಲ್ಲಿ ನಾವು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಹೂಡವಾಗ ಚನ್ನಾಜಮ್ಮನವರ ಮಗ ಮೃತಪಟ್ಟಿದ್ದು, ಅವರ ಹೆಂಡತಿ ನೇತ್ರಾವತಿ, ಚನ್ನಜಮ್ಮನವರ ಮಕ್ಕಳಾದ ಜಲಜಾಕ್ಷಿಮತ್ತು ಶೋಭ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ ೮೨ ಮತ್ತು ೮೩ ರಲ್ಲಿ ಕಾಣುವಂತಹ ತಂಬಾಕು ಬ್ಯಾರಲ್ ಹೌಸ್ ಹರೀಶ್ ರವರಿಗೆ ಸೇರಿದಂತಹ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನನ್ನ ಗಂಡ ಎರಡು ಬೋರ್‌ವೆಲ್‌ಗಳನ್ನು ಕೊರೆಸಿದ್ದರು. ಒಂದೇ ದಿನ ಎರಡು ಬೋರ್‌ವೆಲ್ ಕೊರೆಸಿರುತ್ತಾರೆ. ಸರ್ವೆ ನಂಬರ್ 106/16 ಬೋರ್‌ವೆಲ್ ಕೊರೆಸುವ ಕಾಲಕ್ಕೆ ನಮ್ಮ ಅನುಭವದಲ್ಲಿದ್ದು, ಆ ಕಾರಣದಿಂದ ನಾವು ಬೋರ್‌ವೆಲ್ ಕೊರೆಸಿರುತ್ತೇವೆ. ನಿಪಿ ೯೮ ರ ದಾಖಲೆಯಂತೆ 106/15 ರಲ್ಲಿ ಬೋರ್‌ವೆಲ್ ಕೊರೆಸಿರುತ್ತೇವೆಂದು ದಾಖಲೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ ೮೫ ಹಾಗೂ ೯೮ ರ ದಾಖಲೆಯನ್ನು ಪ್ರಕರಣಕ್ಕಾಗಿ ಸೃಷ್ಠಿ ಮಾಡಿ ನಾವು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ ೯೦ ರ ದಾಖಲೆಯಲ್ಲಿ ಕೆ.ಸಿ. ಮೋಹನ ಬಿನ್ ಚೆನ್ನಾಪಾಜಿ ರವರಿಗೆ ಯಾವ ಆಧಾರದ ಮೇಲೆ ಖಾತೆ ಬಂತು ಎಂದು ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ ೯೧ ರ ದಾಖಲೆಯಂತೆ ನನ್ನ ಗಂಡನ ಬಾಬ್ತು 40*45 ಅಡಿ ಮನೆಯನ್ನು ಮನೆಯನ್ನು ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ಹಳ್ಳಿಮೈಸೂರು ಶಾಖೆಗೆ ಖರೀದಿ ಮಾಡಲು ಜಯವೀರಮ್ಮ, ಲತಾಮಣಿ, ಭುಜಂಗಸ್ವಾಮಿರವರ ಸಹಿಗಳನ್ನು ಪಡೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಮನೆಕಟ್ಟಲು ಪಡೆಯಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ 21 ರ ಪ್ರಮಾಣ ಪತ್ರವನ್ನು ದಿನಾಂಕ : 02.12.2012 ರಂದು ನೋಟರಿ ಮಾಡಲಾಗಿರುತ್ತದೆ ಎಂದರೆ ಹೌದು. ಪ್ರಮಾಣಪತ್ರವನ್ನು ಮಾಡುವ ದಿನದಂದು ನನ್ನ ಗಂಡನಿಗೆ ಆಸ್ತಿಯ ಮೇಲೆ ವೈಯಕ್ತಿಕ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವೈಯಕ್ತಿಕವಾದಂತಹ ಅಧಿಕಾರ ಇಲ್ಲದ ಕಾರಣ ಭುಜಂಗಸ್ವಾಮಿ, ಲತಾಮಣಿ, ಹಾಗೂ ದೇವಿರಮ್ಮನ ಸಹಿಗಳನ್ನು ಪಡೆಯಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ ೯೧ ರ ದಾಖಲೆಯ ಪೂರ್ವದಲ್ಲಿ 3/೯೮-೯೯ ಎಂ.ಆರ್. ಆಗಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ ೯೧ ರ ದಾಖಲೆಗೆ 2 & 3 ನೇ ಪ್ರತಿವಾದಿಗಳ ಸಹಿ ಪಡೆದಿರುವುದಿಲ್ಲ ಎಂದರೆ ಆಗ ಚಿಕ್ಕವರಾಗಿದ್ದರು ಎಂದು ಉತ್ತರಿಸುತ್ತಾರೆ. ನಿಪಿ ೯೨ ರ ದಾಖಲೆಯನ್ನು ಯಾವ ಕಾರಣಕ್ಕಾಗಿ ಪಡೆಯಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ನಮ್ಮ ಕುಟುಂಬದಲ್ಲಿ ಇದುವರೆವಿಗೂ ಯವುದೇ ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖಾತೆಯಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗವಾಗದೇ ಇದ್ದರು ಸಹಾ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಹಾಗೂ ೧ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ಮೋಸದ ಕ್ರಯದ ಕರಾರು ಪತ್ರವನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ . ನಾನು ೧ ನೇ ಪ್ರತಿವಾದಿಗೆ ಹಳ್ಳಿಮೈಸೂರಿನ ಮನೆ, ಕಲ್ಲಹಳ್ಳಿ ಗ್ರಾಮದ ಮೂರು ಎಕರೆ ಜಮೀನನ್ನು ಮೋಸ ಮಾಡುವ ಉದ್ದೇಶದಿಂದ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಬಂದಂತಹ ಆದಾಯದಿಂದ ಖರೀದಿ ಮಾಡಿರುವಂತಹ ಆಸ್ತಿ ಎಂದು ಉತ್ತರಿಸುತ್ತಾರೆ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಬರೆದುಕೊಟ್ಟಂತಹ ಕ್ರಯ ಪತ್ರಗಳು ಸುಳ್ಳು ದಾಖಲೆಯಿಂದ ಸೃಷ್ಠಿ ಮಾಡಿ ಬರೆದುಕೊಟ್ಟಿರುವ ದಾಖಲೆ ಎಂದರೆ ಸರಿಯಲ್ಲ. ನವು ಬರೆದುಕೊಟ್ಟಂತಹ ಕ್ರಯಪತ್ರಗಳು ಪ್ರತಿವಾದಿಗಳಿಗೆ ಬದ್ಧ ಪಡಿಸುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ